ಅ.ದಾ. ಸಂಃ 123/2019 ಪಿ.ಡಬ್ಲ್ಯು: 01

ದಿನಾಂಕಃ 24-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಕೆ.ಬಿ.ಜಿ ವಕೀಲರಿಂದಃ

ಮೂಲ ಪುರುಷ ಲಿಂಗಪ್ಪನ ಮಗ ಪಾಪಣ್ಣ ಎಲ್ಲಾ ಆಸ್ತಿಗಳನ್ನು ಬ್ಯಾಂಕ್ ನಲ್ಲಿ ಅಡಮಾನ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪಾಪಣ್ಣ ರವರು ಹನುಮಂತಯ್ಯ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1986 ರ ವಿಭಾಗ ಪತ್ರದಲ್ಲಿ ನನ್ನ ತಾತನಿಗೆ ಬಂದಂತಹ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಸಂಜೀವರಾಯಪ್ಪನ ಆಸ್ತಿ, ಪಶ್ಚಿಮಕ್ಕೆ ರಾಮಾಂಜಿನಪ್ಪ ನ ಆಸ್ತಿ, ಉತ್ತರಕ್ಕೆ ಶಂಕರನಾರಾಯಣ ಗೌಡ ರವರ ಆಸ್ತಿ ಮತ್ತು ದಕ್ಷಿಣಕ್ಕೆ ಸಂಜೀವರಾಯಪ್ಪನ ಆಸ್ತಿ ಇರುತ್ತದೆ. ಸದರಿ ಆಸ್ತಿಯಲ್ಲಿ ನಾವು ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಗಳು ಇವೆ. ನನ್ನ ತಾತನ ಹೆಸರಿಗೆ ಮ್ಯೂಟೇಶನ್ ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. 1986 ರ ಪೂರ್ವದಲ್ಲಿ ದಾವಾ ಆಸ್ತಿಯು ದೊಡ್ಡನಾರಾಯಣಪ್ಪ ಮತ್ತು ಹನುಮಂತರಾಯಪ್ಪ ರವರ ಹೆಸರಿನಲ್ಲಿ ಜಂಟಿಯಾಗಿತ್ತು ಎಂದರೆ ಸರಿ. ದೊಡ್ಡನಾರಾಯಣಪ್ಪ ಮತ್ತು ಹನುಮಂತರಾಯಪ್ಪ ರವರ ಹೆಸರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು.

ದಾವಾ ಆಸ್ತಿಯು 1986 ರಲ್ಲಿ ವಿಭಾಗ ಆಗಿರುವ ಬಗ್ಗೆ ನನಗೆ ನಾನು 25 ವರ್ಷ ವಯಸ್ಸಿನವನಿದ್ದಾಗ ಗೊತ್ತಾಯಿತು. ಆ ಕೂಡಲೇ ದಾವೆ ಹೂಡಲು ಯಾವುದೇ ತೊಂದರೆ ಇರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು